ದೂರವಾಣಿ ಸಂಖ್ಯೆ : 2419677/2419361
ಫ್ಯಾಕ್ಸ್: 0821-2419363/2419301

e-mail registrar@uni-mysore.ac.in
www.uni-mysore.ac.in

**ಮೈಸೂರು ವಿಶ್ವವಿದ್ಯಾನಿಲಯ**

ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005

ದಿನಾಂಕ: 15.11.2022

AC4/59/2020-21

## ಸುತ್ತೋಲೆ

ವಿಷಯ:- 2022-23ನೇ ಶೈಕ್ಷಣಿಕ ಸಾಲಿಗೆ ಪದವಿ ಪ್ರವೇಶಾತಿಗೆ ಕಾಲಾವಕಾಶ ವಿಸ್ತರಿಸುವ ಬಗ್ಗೆ.

ಉಲ್ಲೇಖ:- 1. ಈ ಕಛೇರಿ ಸುತ್ತೋಲೆ ಸಮಸಂಖ್ಯೆ ದಿನಾಂಕ 20.10.2022.

2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: ಇಡಿ300ಯುಎನ್ಇ 2022 ದಿನಾಂಕ: 14.11.2022.

*****

2022-23ನೇ ಶೈಕ್ಷಣಿಕ ಸಾಲಿನ ಪದವಿ ಕೋರ್ಸ್‌ನ ಪ್ರಥಮ ವರ್ಷಕ್ಕೆ ಪ್ರವೇಶಾತಿಯನ್ನು ರೂ.500/-ಗಳ ದಂಡಶುಲ್ಕದೊಂದಿಗೆ ದಿನಾಂಕ 22.10.2022ರ ವರೆಗೆ ಉಲ್ಲೇಖಿತ (2)ರ ಸುತ್ತೋಲೆಯಲ್ಲಿ ವಿಸ್ತರಿಸಲಾಗಿತ್ತು.

ಉಲ್ಲೇಖ (2) ರನ್ವಯ ಸರ್ಕಾರದ ಪತ್ರದಲ್ಲಿ CET Counseling ಪ್ರವೇಶಾತಿಯು ತಡವಾಗಿರುವುದರಿಂದ, Counseling ಪೂರ್ಣಗೊಂಡ ನಂತರ ಕೆಲವೊಂದು ವಿದ್ಯಾರ್ಥಿಗಳು ಪದವಿಗೆ ಪ್ರವೇಶಾತಿ ಪಡೆಯುವ ಸಾಧ್ಯತೆ ಇರುವುದರಿಂದ ಹಾಗೂ ಹಾಲಿ ಬಿ.ಎಸ್ಸಿ ಪದವಿಗೆ ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯೆಯು ಕಡಿಮೆ ಆಗಿರುವ ಹಿನ್ನಲೆಯಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಈಗಾಗಲೇ ಸಂಯೋಜನೆ ನೀಡಲಾದ ಬಿ.ಎಸ್ಸಿ ಮತ್ತು ಬಿ.ಸಿ.ಎ ಪದವಿ ಕೋರ್ಸ್‌ಗಳಿಗೆ ಹಾಗೂ ಕಮರ್ಷಿಯಲ್ ಪ್ರಾಕ್ಟೀಸ್ (ಕನ್ನಡ ಮತ್ತು ಇಂಗ್ಲೀಷ್) ನಾನ್ ಇಂಜಿನಿಯರಿಂಗ್ ಕೋರ್ಸಿನ ಪರೀಕ್ಷೆಯ ಫಲಿತಾಂಶವು ದಿನಾಂಕ 14.10.2022ರಂದು ಪ್ರಕಟವಾಗಿದ್ದು, ಲ್ಯಾಟರಲ್ ಎಂಟ್ರಿ 2ನೇ ವರ್ಷ/3ನೇ ಸೆಮಿಸ್ಟರ್ ಪದವಿ ಕೋರ್ಸಿಗೆ ಪ್ರವೇಶ ದಿನಾಂಕವು ಅಂತಿಮಗೊಂಡಿರುವುದರಿಂದ, ಸದರಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಮುಂದಿನ ವ್ಯಾಸಂಗವನ್ನು ಮುಂದುವರೆಸಲು ಡಿಪ್ಲೊಮೊ ಇನ್ ಕಮರ್ಷಿಯಲ್ ಪ್ರಾಕ್ಟೀಸ್ ವಿದ್ಯಾರ್ಥಿಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷ/3ನೇ ಸೆಮಿಸ್ಟರ್ ಬಿ.ಕಾಂ/ಬಿ.ಬಿ.ಎ ಪದವಿ ಕೋರ್ಸಿನ ಪ್ರವೇಶಾತಿಯನ್ನು ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ದಿನಾಂಕ 25.11.2022ರವರೆಗೆ ರೂ.500/-ಗಳ ದಂಡಶುಲ್ಕದೊಂದಿಗೆ ಪ್ರವೇಶಾತಿ ದಿನಾಂಕವನ್ನು ವಿಸ್ತರಿಸಲಾಗಿದೆ.

ಈ ಮೇಲ್ಕಂಡ ಪ್ರವೇಶಾತಿ ವಿಸ್ತರಣೆಯು ಈ ಕೆಳಕಂಡ ಷರತ್ತುಗೊಳಪಟ್ಟಿರುತ್ತದೆ:-

- ಅಸ್ತಿತ್ವದಲ್ಲಿರುವ ತರಗತಿಗಳು ಮತ್ತು ಕೋರ್ಸ್‌ಗಳಿಗೆ ಯಾವುದೇ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು.
- ತರಗತಿಗಳು, ಪ್ರಾಯೋಗಿಕ ಪರೀಕ್ಷೆ ಅಥವಾ ಲಿಖಿತ ಪರೀಕ್ಷೆಗಳನ್ನು ಬದಲಾಯಿಸುವಂತಿಲ್ಲ ಮತ್ತು ಮುಂದೂಡುವುವಂತಿಲ್ಲ. ಉನ್ನತ ಶಿಕ್ಷಣ ಇಲಾಖೆಯು ಹೊರಡಿಸಿರುವ ವೇಳಾಪಟ್ಟಿಯನ್ವಯ ಕಟ್ಟುನಿಟ್ಟಾಗಿ ಅನುಸರಿಸತಕ್ಕದ್ದು.
- ಅಸ್ತಿತ್ವದಲ್ಲಿರುವ ಯಾವುದೇ ಕೋರ್ಸ್‌ಗಳಿಗೆ ತೊಂದರೆಯಾಗದಂತೆ ನೋಡಿಕೊಳ್ಳತಕ್ಕದ್ದು.
- NEP ಇತರ ಪೋಗ್ರಾಂಗಳಲ್ಲಿ ಸೀಟುಗಳು ಲಭ್ಯವಿದ್ದಲ್ಲಿ ಅಂತಹ ಪ್ರೋಗ್ರಾಂಗಳಿಗೂ ಸಹ ಮೇಲೆ ತಿಳಿಸಿದ ದಿನಾಂಕದೊಳಗೆ ಪ್ರವೇಶಾತಿ ನೀಡತಕ್ಕದ್ದು.

Scanned with CamScanner

ಉಲ್ಲೇಖಿತ (I)ರಂತೆ ಕ್ರಮವಹಿಸುವಾಗ ಪ್ರವೇಶಾತಿಗಳು ಪೂರ್ಣವಾಗದಿದ್ದಲ್ಲಿ ಅಂತಹ ಪ್ರವೇಶಾತಿಗಳನ್ನು ಸಹ ಪೂರ್ಣಗೊಳಿಸುವುದು.

ಎರಡು ಮತ್ತು ಮೂರನೇ ವರ್ಷದ ವಿದ್ಯಾರ್ಥಿಗಳು ಪ್ರವೇಶಾತಿಗೆ ಶುಲ್ಕ ಪಾವತಿಸದಿದ್ದಲ್ಲಿ ಅಂತಹ ವಿದ್ಯಾರ್ಥಿಗಳಿಗೂ ಸಹ ವಿಶೇಷ ದಂಡ ಶುಲ್ಕ ರೂ.500/-ಗಳನ್ನು ಪಾವತಿಸಿಕೊಂಡು ದಿನಾಂಕ 25.11.2022ರೊಳಗೆ ಪ್ರವೇಶಾತಿ ಮಾಡಿಕೊಳ್ಳುವುದು.

ಎರಡನೇ ವರ್ಷದ ವರ್ಗಾವಣೆ (NEP) ಪ್ರವೇಶಾತಿಗಳನ್ನು (With in the University) offlineನಲ್ಲಿ ಮಾಡಿಕೊಂಡು ನಂತರ UUCMSನಲ್ಲಿ Upload ಮಾಡುವುದು.

University to University ಎರಡನೇ ವರ್ಷದ (NEP) ವರ್ಗಾವಣೆಗಳಿಗೆ ವರ್ಗಾವಣೆವಾಗುವ ವಿಶ್ವವಿದ್ಯಾನಿಲಯದಿಂದ ಎರಡನೇ ಸೆಮಿಸ್ಟರ್‌ನ ಫಲಿತಾಂಶಗಳು ಪ್ರಕಟವಾದ ನಂತರವೇ ನಿಯಮಾನುಸಾರ ವರ್ಗಾವಣೆ ಪ್ರವೇಶಾತಿ ನೀಡುವುದು.

ಕುಲಸಚಿವ 15/11/2022

ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ,
ಮೈಸೂರು.

ಗೆ:-

1. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಎಲ್ಲಾ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
2. ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ನಿರ್ದೇಶಕರು, ಜಯಚಾಮರಾಜೇಂದ್ರ ದೃಶ್ಯ ಕಲಾ ಅಕಾಡೆಮಿ, ಸಯ್ಯಾಜಿರಾವ್ ರಸ್ತೆ, ಮೈಸೂರು.
4. ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಪ್ರೊ.ಎಚ್.ಎಸ್ ನಾಗೇಂದ್ರಸ್ವಾಮಿ, ನೋಡಲ್ ಆಫೀಸರ್- UUCMS, ಕಂಪ್ಯೂಟರ್ ಸೈನ್ಸ್ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
6. ಮಾನ್ಯ ಕುಲಪತಿ/ ಕುಲಸಚಿವ/ ಕುಲಸಚಿವ(ಪರೀಕ್ಷಾಂಗ)ರವರ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕಛೇರಿ ಪ್ರತಿ.

Scanned with CamScanner